ಸಿಸಿ ನಂಃ 2029/2025
ಸಿ.ಡಬ್ಲೂ 1/ಪಿ.ಡಬ್ಲೂ 1

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2029/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ವಿಠಲ ಹುಲಮನಿ |
| ತಂದೆಯ ಹೆಸರು | ಃ | ಸಿದ್ದಪ್ಪ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಕೃಷಿ |
| ವಾಸ ಸ್ಥಳ | ಃ | ನುಗ್ಗಿಕೇರಿ , ಧಾರವಾಡ. |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **07-03-2026**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

2 ನೇ ಆರೋಪಿ ನನ್ನ ಅಣ್ಣನಿರುತ್ತಾನೆ . ದಿಃ 02.08.2025 ರಂದು ನನ್ನ ಅಣ್ಣ ಕೆಎ-25/3531 ರಲ್ಲಿ ಧಾರವಾಡದ ಮಾರುಕಟ್ಟೆಗೆ ಹೋಗಿದ್ದರು . ಸ್ವಲ್ಪ ಸಮಯದ ನಂತರ ಅವರ ಪೋನಿನಿಂದ ನನ್ನ ಪೋನಗೆ ಒಂದು ಕರೆ ಬಂತು . ಹಾಗೆ ಕರೆ ಮಾಡಿದವರು ನನ್ನ ಅಣ್ಣನ ಮೋಟರ ಸೈಕಲಗೆ ಆರ್ಯಭಟ ಕಾಲೇಜು ಬಳಿ ಅಪಘಾತವಾಗಿದೆ ಎಂದು ಹೇಳಿದರು . ನಂತರ ನಾನು ಅಪಘಾತ ಸ್ಥಳಕ್ಕೆ ಬಂದೆನು . ನಾನು ನೋಡಲಾಗಿ ನನ್ನ ಅಣ್ಣನ ತಲೆಗೆ ಪೆಟ್ಟಾಗಿತ್ತು . ನಂತರ ಅವರನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ಅಂಬುಲೆನ್ಸನಲ್ಲಿ ಕರೆದುಕೊಂಡು ಹೋದೆನು. ಸ್ಥಳದಲ್ಲಿ ಇದ್ದ ಜನರನ್ನು ವಿಚಾರಿಸಲಾಗಿ ಕಲಘಟಗಿ ಕಡೆಯಿಂದ ಧಾರವಾಡದ ಕಡೆ ಬರುತ್ತಿದ್ದ ಗೂಡ್ಸ ವಾಹನ ನನ್ನ ಅಣ್ಣನ ಮೋಟರ ಸೈಕಲಗೆ ಡಿಕ್ಕಿಪಡಿಸಿರುವುದಾಗಿ ತಿಳಿಯಿತು . ನಂತರ ನಾನು ಈ ಕುರಿತು ದೂರು ನೀಡಿದ್ದೆನೆ . ಸಾಕ್ಷಿ ಗುರುತಿಸಿದ ದೂರನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು .

ಸಿಸಿ ನಂಃ 2029/2025
ಸಿ.ಡಬ್ಲೂ 1/ಪಿ.ಡಬ್ಲೂ 1

ಅದೇ ದಿನ ಪೊಲಿಸರು ನನ್ನನ್ನು ಅಪಘಾತ ಸ್ಥಳಕ್ಕೆ ಕರೆದುಕೊಂಡು ಹೋದರು . ನಾನು ತೊರಿಸಿದ ಸ್ಥಳದಲ್ಲಿ ಮಃ 3.00 ರಿಂದ 3.30 ವರೆಗೆ ನಾನು ತೊರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿದರು . ಸಾಕ್ಷಿ ಗುರುತಿಸಿದ ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು . ಅದೇ ಸಮಯಕ್ಕೆ ತೆಗೆದ ಪೋಟೋವನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು . ಅದೇ ದಿನ ಗಾಯಾಳುವನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದೆವು . ಅಲ್ಲಿ ಅವರು ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದರು . ಈ ಕುರಿತು ಪೊಲಿಸರಿಗೆ ಮರು ಹೇಳಿಕೆ ನೀಡಿದೆನು .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ನನ್ನ ದೂರಿನಲ್ಲಿ ಮಿನಿ ಗೂಡ್ಸ್ ವಾಹನ ಚಾಲಕನು ನುಗ್ಗಿಕೇರಿ ಕಲಡೆಯಿಂದ ಧಾರವಾಡದ ಕಡೆಗೆ ಅತೀ ವೇಗ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು ಎದುರಿನಿಂದ ಬುರುತ್ತಿದ್ದ ನನ್ನ ಅಣ್ಣನ ಮೋಟರ ಸೈಕಲಿಗೆ ಡಿಕ್ಕಿಪಡಿಸಿರುವುದಾಗಿ ಹೇಳಿದರು ಎಂದರೆ ಸರಿ . ನಂತರ ನನಗೆ ದೂರವಾಣಿ ಮೂಲಕ ಮಾಹಿತಿ ನೀಡಿರುತ್ತಾರೆ ಎಂದರೆ ಸರಿ . ಮಿನಿ ಗೂಡ್ಸ್ ವಾಹನ ನಂಃ ಕೆಎ-25/ಎಎ-2090 ಅಂತ ಇತ್ತು ಎಂದರೆ ಸರಿ . ಸದರಿ ವಾಹನದ ಚಾಲಕನ ಹೆಸರು ತಿಪ್ಪಣ್ಣ ಯಲ್ಲಪ್ಪ ನರೇಂದ್ರ ಅಂತ ತಿಳಿಯಿತು ಎಂದರೆ ಸರಿ . ಅಪಘಾತವಾದಾಗ ಸಮಯ ಮಃ 1.00 ಗಂಟೆಯಾಗಿತ್ತು ಎಂದರೆ ಸರಿ . ತನಿಖಾಧಿಕಾರಿಯ ಮುಂದೆ ಅಪಘಾತ ಸ್ಥಳ ತೊರಿಸಿದ ಬಗ್ಗೆ ಮತ್ತು ಅಪಘಾತಪಡಿಸಿದ ವಾಹನ ಚಾಲಕ ವಾಹನ ಬಿಟ್ಟು ಓಡಿ ಹೋದನು ಎಂದು ಮರು ಹೇಳಿಕೆ ನೀಡಿದ್ದೆನೆ ಎಂದರೆ ಸರಿ .

ಸಿಸಿ ನಂಃ 2029/2025
ಸಿ.ಡಬ್ಲೂ 1/ಪಿ.ಡಬ್ಲೂ 1

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ ಎಂ ಜಿ ವಕೀಲರಿಂದ**

ಆರೋಪಿ ಪರ ವಕೀಲರು ಗೈರು ಹಾಜರು ಇದ್ದು , ಆರೋಪಿಯು ಪಾಟೀಸವಾಲಿಗೆ ಕಾಲಾವಕಾಶ ಕೇಳಿದ್ದು ಸಕಾರಣಗಳು ಇಲ್ಲದ ಕಾರಣ ಕೋರಿಕೆಯನ್ನು ತಿರಸ್ಕರಿಸಿ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.